**ಓ ಎಸ್ 145/2023 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 16.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1, 3, ಮತ್ತು 5 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ ಎಂ ಕೆ ಸಿ ವಕೀಲರಿಂದಃ**

ನನ್ನ ತಂದೆಯು ಯಜಮಾನಿಕೆ ಮಾಡುವುದನ್ನು ಬಿಟ್ಟು ಸುಮಾರು 20 ವರ್ಷಗಳಾಗಿವೆ. ನಮ್ಮ ತಂದೆ ಬದುಕಿದ್ದಾಗಲೇ ಎಲ್ಲರಿಗೂ ಜಮೀನುಗಳನ್ನು ಮತ್ತು ಮನೆಗಳನ್ನು ಬೇರೆ ಬೇರೆಯಾಗಿ ಕೊಟ್ಟಿದ್ದರು. ಎಲ್ಲರೂ ಜಮೀನುಗಳನ್ನು ಮಾಡಿಕೊಳ್ಳುತ್ತಿದ್ದರು, ನಾನು ಬೆಂಗಳೂರಿನಲ್ಲಿ ವಾಸ ಇದ್ದೆ. ನಮ್ಮ ಮನೆಯಲ್ಲಿ ಯಾರು ಇರಲಿಲ್ಲ ಖಾಲಿ ಇತ್ತು. ನನ್ನ ಜಮೀನನ್ನು ನಾನು ಯಾರಿಗೂ ಕೊಡದೆ ಇದ್ದರೂ ಸಹ ಆ 3 ಜನರೇ ಉತ್ತುಕೊಂಡು ವ್ಯವಸಾಯ ಮಾಡುತ್ತಿದ್ದರು.

ಯಾರು ಯಾರು ಯಾವ ಯಾವ ಸರ್ವೆ ನಂಬರಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಬಂದಿರುವ ಸರ್ವೆ ನಂಬರಿನಲ್ಲಿ ಅವರೇ ಮಾಡುತ್ತಿದ್ದಾರೆ.

ದಾವಾ ಷೆಡ್ಯೂಲ್ ಐಟಂ ನಂ.1 ರಲ್ಲಿ ಗೋವಿಂದೇಗೌಡರಿಗೆ 0.12 ಗುಂಟೆ ಮತ್ತು ನನಗೆ, ಸಣ್ಣೇಗೌಡರಿಗೆ ಮತ್ತು ವೆಂಕಟೇಶರವರಿಗೆ ತಲಾ 0.10 ಗುಂಟೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಜಮೀನು ಎಷ್ಟು ಗುಂಟೆ ಎಂದು ನನಗೆ ಗೊತ್ತಿಲ್ಲ. ದಾವೆ ಹೂಡಲು ನನ್ನ ವಕೀಲರಿಗೆ ನನ್ನ ಮಗಳು ಮಾಹಿತಿಯನ್ನು ನೀಡಿದ್ದಾಳೆ. ನನಗೆ ಈ ದಾವೆಯ ಸಂಗತಿಗಳು ಗೊತ್ತಿಲ್ಲ. ದಾವಾ ಐಟಂ ನಂ.2 ರಲ್ಲಿ 4 ಜನರಿಗೂ ತಲಾ 0.04 ಗುಂಟೆಯಂತೆ ಗೋವಿಂದೇಗೌಡರಿಗೆ, ನನಗೆ ಮತ್ತು ಸಣ್ಣೇಗೌಡರಿಗೆ ಹಂಚಿಕೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.3 ರಲ್ಲಿ ಉತ್ತರದಕ್ಷಿಣದಳೆಯಾಗಿ ಭಾಗ ಮಾಡಿ ನನಗೆ 0.06 ಗುಂಟೆ, ಸಣ್ಣೇಗೌಡರಿಗೆ 0.07 ಗುಂಟೆ, ವೆಂಕಟೇಶರವರಿಗೆ 0.06 ಗುಂಟೆ ಮತ್ತು

ಗೋವಿಂದೇಗೌಡರಿಗೆ 0.06 ಗುಂಟೆ ಹಂಚಿಕೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ತನ್ನ ತಂದೆಯು ಇಂತಿಂತಹ ಜಮೀನುಗಳನ್ನು ಮಾಡಿಕೊಳ್ಳಿ ಎಂದು 4 ಜನರಿಗೆ ಹೇಳಿದ್ದಾರೆಯೇ ವಿನಹ ಅಳತೆ ಮಾಡಿ ಗಡಿ ಗುರುತುಗಳನ್ನು ಮಾಡಿಕೊಟ್ಟಿರಲಿಲ್ಲ ಎಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಐಟಂ ನಂ.3 ನ್ನು ಪೂರ್ವ ಪಶ್ಚಿಮದೆಳೆಯಾಗಿ ಭಾಗ ಮಾಡಿ ನನಗೆ ಮತ್ತು ಗೋವಿಂದೇಗೌಡರಿಗೆ ತಲಾ 0.03 ಗುಂಟೆಯಂತೆ ಹಂಚಿಕೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.5 ನ್ನು ಗ್ರಾಮಸ್ಥರ ಅನುಕೂಲಕ್ಕಾಗಿ ನಮ್ಮ ತಂದೆ ಬಿಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರತಿವಾದಿಗಳೇ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಐಟಂ ನಂ.6 ನ್ನು ನಮ್ಮ ತಂದೆಯು ಎಲ್ಲರೂ ಹುಲ್ಲುಮೆದೆ ಹಾಕಿಕೊಳ್ಳಲು ಬಿಟ್ಟಿದ್ದರು ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ.7 ರಲ್ಲಿರುವ 0.02 ಗುಂಟೆ ಜಮೀನಿನಲ್ಲಿ ನನಗೆ ಮತ್ತು ಸಣ್ಣೇಗೌಡರಿಗೆ ತಲಾ 0.01 ಗುಂಟೆ ಎಂದು ನಮ್ಮ ತಂದೆ ಹೇಳಿದ್ದರು. ಅದು 0.02 ಗುಂಟೆ ಇರುವ ಕಾರಣ ಪೂರ್ತಿ ಜಾಗವನ್ನು ಸಣ್ಣೇಗೌಡರಿಗೆ ನೀಡಬೇಕು ಎಂದು ನಮ್ಮ ತಂದೆ ಹೇಳಿದ್ದರು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ. 8 ನಮ್ಮ ಅಜ್ಜಿ ಪಾಪಮ್ಮರವರಿಗೆ ಸೇರಿತ್ತು ಎಂದರೆ ಸರಿ. ನಮ್ಮ ಅಜ್ಜಿಯನ್ನು ಯರೇಗೌಡನಹಳ್ಳಿಯ ಪಾಪಮ್ಮ ಎಂದು ಕರೆಯುತ್ತಿದ್ದರು ಎಂದರೆ ಸರಿ. ನಮ್ಮ ಅಜ್ಜಿಯನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು. ನಮ್ಮ ಅಜ್ಜಿಯನ್ನು ಸಣ್ಣೇಗೌಡರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಅಜ್ಜಿಯ ಉತ್ತರ ಕ್ರಿಯಾಧಿಗಳನ್ನು ಸಣ್ಣೇಗೌಡರು ಮಾಡಿದ್ದಾರೆ ಎಂದರೆ ಸರಿಯಲ್ಲ, ನಮ್ಮ ತಂದೆ ಮಾಡಿದ್ದಾರೆ. ಆ ಜಮೀನನ್ನು ಸಹ ನಮ್ಮ ತಂದೆಯು 4 ಜನರಿಗೆ ಸಮಾನವಾಗಿ ಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ.

ನನ್ನ ಮೊದಲನೇ ಮಗಳಿಗೆ ಸುಮಾರು 40 ವರ್ಷಕ್ಕಿಂತ ಹೆಚ್ಚು ವಯಸ್ಸು

ಆಗಿದೆ. ನನ್ನ ಎರಡನೇ ಮಗಳಿಗೆ ಮದುವೆ ಮಾಡಿ 15 ವರ್ಷ ಆಗಿದೆ. ನನ್ನ ಮೊದಲ ಮಗಳ ಮದುವೆಯನ್ನು ನನ್ನ ತಂದೆ ಮಾಡಿದರು. 2 ನೇ ಮಗಳ ಮದುವೆಯನ್ನು ನಾನು ಮಾಡಿದೆ. ಆ ವೇಳೆಗಾಗಲೇ ಬೇರೆ ಬೇರೆಯಾಗಿದ್ದೆವು. ನನ್ನ ಮೊದಲ ಮಗಳ ಮದುವೆ ಆಗಿ ಸುಮಾರು 28 ರಿಂದ 30 ವರ್ಷವಾಗಿದೆ ಎಂದರೆ ಸರಿ. 2 ನೇ ಮಗಳ ಮದುವೆ 2005 ರಲ್ಲಿ ಆಗಿದೆ. ಈ ಎರಡು ಮದುವೆಗಳು ಆದ ಸಮಯಕ್ಕೆ ನಾವು ಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಮಾಡುತ್ತಿದ್ದೆವು ಎಂದರೆ ನನ್ನ ಹಿರಿಯ ಮಗಳ ಮದುವೆಯಾದಾಗ ಎಲ್ಲರೂ ಒಟ್ಟಿಗೆ ಇದ್ದೆವು ಮತ್ತು ನನ್ನ ಕಿರಿಯ ಮಗಳ ಮದುವೆಗೆ ಮೊದಲು ನಮ್ಮ ತಂದೆ ಎಲ್ಲರಿಗೂ ಇಂತಿಂತಹ ಜಮೀನುಗಳನ್ನು ಮಾಡಿಕೊಂಡು ಹೋಗಿ ಎಂದು ಹೇಳಿದ್ದರಿಂದ ಬೇರೆಬೇರೆ ವಾಸ ಮಾಡುತ್ತಿದ್ದೆವು, ಆದರೆ ಗಡಿ ಗುರುತುಗಳನ್ನು ಮಾಡಿಕೊಟ್ಟಿರಲಿಲ್ಲ. ನನ್ನ 2 ನೇ ಮಗಳ ಮದುವೆಗಿಂತ 3 ವರ್ಷ ಹಿಂದಿನಿಂದ ನಾವೆಲ್ಲರೂ ಬೇರೆ ಬೇರೆ ವಾಸ ಮಾಡುತ್ತಿದ್ದೆವು. 2005 ರಲ್ಲಿ ನನ್ನ 2 ನೇ ಮಗಳ ಮದುವೆಯಾಗಿದೆ ಎಂದರೆ ಸರಿ. ನನ್ನ 2 ನೇ ಮಗಳನ್ನು ಚಿಕ್ಕಾಡೆ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದೇವೆ. ಅವರ ಮದುವೆಯನ್ನು ಪಾಂಡವಪುರ ಟೌನ್ ನ ಶಿಕ್ಷಕರ ಭವನದಲ್ಲಿ ಮಾಡಿದೆವು.

ನಾನು ಊರಿನಲ್ಲಿ ವ್ಯವಸಾಯ ಹೊರತುಪಡಿಸಿ ಬೇರೆ ಏನು ಮಾಡುತ್ತಿರಲಿಲ್ಲ. ನಮ್ಮ ತಂದೆ ಜಮೀನುಗಳನ್ನು ಮಾಡಿಕೊಂಡು ಹೋಗಿ ಎಂದು ಹೇಳಿದಾಗ ಹಣ ಯಾವುದು ಹಂಚಿಕೆ ಮಾಡಲಿಲ್ಲ. ನನ್ನ 2 ನೇ ಮಗಳ ಮದುವೆ ಕಾಲದಲ್ಲಿ ನನ್ನ ತಂದೆ ಬದುಕಿದ್ದರು. ನನ್ನ 2 ನೇ ಮಗಳ ಮದುವೆಗೆ ಸುಮಾರು 2 ಲಕ್ಷ ಖರ್ಚು ಆಗಿದೆ. ಹುಡುಗನಿಗೆ ಮತ್ತು ಹುಡುಗಿಗೆ ಸೇರಿ ಸುಮಾರು 5-6 ಲಕ್ಷ ಖರ್ಚು ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ 2 ನೇ ಮಗಳ ಮದುವೆ ಸಮಯದಲ್ಲಿ ದಾವಾ ಷೆಡ್ಯೂಲ್ ಐಟಂ ನಂ. 1 ರಲ್ಲಿನ 0.10 ಗುಂಟೆ ಜಮೀನನ್ನು ದಾವಾ ಷೆಡ್ಯೂಲ್ ಐಟಂ ನಂ. 8 ರಲ್ಲಿನ 0.10 ಗುಂಟೆ ಜಮೀನನ್ನು ಬಾಯಿ ಮಾತಿನ ಮೂಲಕ ರೂ.

1,60,000/- ಗಳಿಗೆ ಸಣ್ಣೇಗೌಡರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.8 ರಲ್ಲಿ 0.10 ಗುಂಟೆ ಜಮೀನನ್ನು ಬಾಯಿ ಮಾತಿನ ಮೂಲಕ ವೆಂಕಟೇಶರವರಿಗೆ ರೂ.1,00,000/-ಗಳಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಹೀಗೆ ಜಮೀನುಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ನನ್ನ 2 ನೇ ಮಗಳ ಮದುವೆ ಮಾಡಿ ಬೆಂಗಳೂರಿಗೆ ಹೋಗಿ ನೆಲಸಿದ್ದೆ ಎಂದರೆ ನನ್ನ ಮಗಳ ಮದುವೆಯನ್ನು ನನ್ನ ಬಾಮೈದ ಖರ್ಚು ಮಾಡಿ ಮಾಡಿದ್ದಾನೆಯೇ ಹೊರತು ನಾನು ಯಾರಿಂದಲೂ ಹಣ ಪಡೆದುಕೊಂಡಿಲ್ಲ. ನನ್ನ ಮಗಳ ಮದುವೆಯಾದ ನಂತರ ನಾನು ಬೆಂಗಳೂರಿಗೆ ಹೋದೆ. ನನ್ನ ಮಗಳಿಗೆ ನಿವೇಶನ ಖರೀದಿಸುವ ಸಲುವಾಗಿ ದಾವಾ ಷೆಡ್ಯೂಲ್ ಐಟಂ ನಂ. 10 ರಲ್ಲಿ 0.13 ಗುಂಟೆ ಜಮೀನನ್ನು ಬಾಯಿ ಮಾತಿನ ಮೂಲಕ ರೂ.2 ಲಕ್ಷಕ್ಕೆ ಗೋವಿಂದೇಗೌಡರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾವು ವಿಭಾಗ ಆದ ನಂತರವೂ ಸಹ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಚೆನ್ನಾಗಿ ಇರುವ ಕಾರಣ ಅವರು ನನಗೆ ಬಾಯಿ ಮಾತಿನ ಮೂಲಕ ಹಣ ನೀಡಿದರು ಎಂದರೆ ಸರಿಯಲ್ಲ.

ಈಗ ವಾಸ ಮಾಡುತ್ತಿರುವ ನನ್ನ ಮನೆಯ ಚಕ್ಕುಬಂದಿ ನನಗೆ ಗೊತ್ತಿಲ್ಲ, ಹಾಗೆಯೇ ಗೋವಿಂದೇಗೌಡರು ವಾಸ ಮಾಡುತ್ತಿರುವ ಚಕ್ಕುಬಂದಿಯು ಸಹ ನನಗೆ ಗೊತ್ತಿಲ್ಲ. ನಾನು ಮತ್ತು ಸಣ್ಣೇಗೌಡರು ಒಂದು ಮನೆಯನ್ನು ಭಾಗ ಮಾಡಿಕೊಂಡು ಅದರಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ. ಅದರ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.13 ಗೋವಿಂದೇಗೌಡರಿಗೆ ಗ್ರಾಮ ಪಂಚಾಯಿತಿಯಿಂದ ಮಂಜೂರಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮೂಲತಃ ಆ ಜಾಗ ಅವರ ಕುಟುಂಬದ್ದು ಮತ್ತು ಆ ಕಾರಣದಿಂದ ತನಗೂ ಭಾಗ ಇದೆ ಎಂದು ಹೇಳುತ್ತಾರೆ.

ದಾವಾ ಷೆಡ್ಯೂಲ್ ಐಟಂ ನಂ. 9 ಗೋವಿಂದೇಗೌಡರ ಸ್ವಯಾರ್ಜಿತ ಎಂದರೆ ಸರಿಯಲ್ಲ. ನಮ್ಮ ತಂದೆ ಬದುಕಿದ್ದಾಗಲೇ 1991 ರಲ್ಲಿಯೇ ನಮಗೆಲ್ಲಾ ಭಾಗ ಮಾಡಿಕೊಟ್ಟಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೋವಿಂದೇಗೌಡರಿಗೆ ಮಂಜೂರಾಗಿರುವ ದಾವಾ ಷೆಡ್ಯೂಲ್ ಐಟಂ ನಂ.9 ರ ನಮ್ಮ ಗ್ರಾಮದ ತಿಮ್ಮೇಗೌಡ ಮತ್ತು ಇತರರು ಗೋವಿಂದೇಗೌಡರ ವಿರುದ್ಧ ಕೇಸು ಹಾಕಿಕೊಂಡಿದ್ದರು ಎಂದರೆ ಸರಿ. ಆ ಕೇಸು ಗೋವಿಂದೇಗೌಡರ ವಿರುದ್ಧ ಆಗಿ ಅವರು ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಆ ಮೇಲ್ಮನವಿ ಇನ್ನು ಬಾಕಿ ಇದೆ ಎಂದರೆ ಸರಿಯಲ್ಲ.

**4 ನೇ ಪ್ರತಿವಾದಿ ಪರ ವಕೀಲರಿಂದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**